# ಸ್ವಾಮಿ ವಿರಜಾನಂದರು

ವಿ. ಮೀನಾ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ಸ್ವಾ**ಮಿ ವಿರಜಾನಂದರು ವೇದಾಂತ ಪ್ರಚಾರ ಕಾರ್ಯಕ್ಕಾಗಿ ಸ್ವಾಮಿ ಪ್ರಕಾಶಾನಂದರೊಡಗೂಡಿ ೧೮೯೬ರಲ್ಲಿ ಢಾಕಾಕ್ಕೆ ತೆರಳುವಾಗ ಸ್ವಾಮಿ ವಿವೇಕಾನಂದರು ಅವರೀರ್ವರನ್ನೂ ಆಶೀರ್ವದಿಸಿ "ನಿಮ್ಮಲ್ಲಿ ಶ್ರೀರಾಮಕೃಷ್ಣರ ಶಕ್ತಿ ಕೆಲಸ ಮಾಡುತ್ತದೆ. ಈ ಸಂಘವೇ ಶ್ರೀರಾಮಕೃಷ್ಣರ ಸಮಷ್ಟಿ ಶರೀರವೆಂದು ತಿಳಿಯಿರಿ" ಎಂದರು. ೧೮೯೭ರಲ್ಲಿ ಢಾಕಾದಿಂದ ಹಿಂದಿರುಗಿದ ನಂತರ ವಿರಜಾನಂದರು ವಿವೇಕಾನಂದರ ಸೇವೆಯಲ್ಲಿ ನಿರತರಾದರು. ಅದೇ ವರ್ಷ ಸ್ವಾಮೀಜಿಯವರು ಮತ್ತೆ ಪಾಶ್ಚಾತ್ಯ ದೇಶಗಳಿಗೆ ತೆರಳಿದಮೇಲೆ, ೧೯೦೦ರಲ್ಲಿ ವಿರಜಾನಂದರು ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಕಾರ್ಯ ನಿರ್ವಹಿಸಲು ಅಲ್ಲಿಗೆ ಹೋದರು. 'ಪ್ರಬುದ್ಧ ಭಾರತ'ದ ಸಂಪಾದಕರಾದ ಸ್ವಾಮಿ ಸ್ವರೂಪಾನಂದರಿಗೆ ವಿಶೇಷವಾಗಿ ಸಹಾಯ ಮಾಡುತ್ತಿದ್ದರು. ಅದೇ ವರ್ಷ ಮಾಯಾವತಿಯಲ್ಲಿದ್ದ ಶ್ರೀಮಾನ್ ಸೇವಿಯರರು ಮರಣವಪ್ಪಲು ಅವರ ಶ್ರೀಮತಿಯನ್ನು ಸಾಂತ್ವನಗೊಳಿಸಲು ಅಮೆರಿಕದಿಂದ ಮರಳಿದ ಸ್ವಾಮಿ ವಿವೇಕಾನಂದರು ಅದ್ವೈತ ಆಶ್ರಮಕ್ಕೆ ತೆರಳಲು ನಿರ್ಧರಿಸಿದರು.

ಸ್ವಾಮಿ ವಿವೇಕಾನಂದರು ಶಿವಾನಂದರು, ಸದಾನಂದರಿಂದ ಒಡಗೂಡಿ ಕಲ್ಕತ್ತೆಯಿಂದ ಹೊರಟು ಕಾಟ್‌ಗೋದಾಮ್‌ಗೆ ಪ್ರಯಾಣ ಕೈಗೊಂಡರು. ಇತ್ತ ಕಡೆ ಸ್ವಾಮೀಜಿಯವರು ಮಾಯಾವತಿಗೆ ಬರುತ್ತಿರುವ ಸುದ್ದಿಯನ್ನು ತಿಳಿದು ವಿರಜಾನಂದರು ಬಹುಶ್ರಮವಹಿಸಿ ಗ್ರಾಮದಲ್ಲೆಲ್ಲಾ ಹುಡುಕಾಡಿ ಕೂಲಿಗಳನ್ನೂ, ಕುದುರೆಗಳನ್ನೂ, ದಂಡಿಗಳನ್ನೂ ಸಿದ್ಧಪಡಿಸಿಕೊಂಡು ಕಾಲ್ದಾರಿಯಲ್ಲಿ ನಡೆದು, ರೈಲು ನಿಲ್ದಾಣಕ್ಕೆ ಬರುವುದಕ್ಕೆ ೫ ಗಂಟೆ ಮುಂಚಿತವಾಗಿಯೇ ಕಾಟ್‌ಗೋದಾಮ್ ತಲುಪಿದರು. ೨೮.೧೨.೧೯೦೦ರ ಬೆಳಗ್ಗೆ ರೈಲಿನಿಂದ ಇಳಿಯುತ್ತಾ ವಿರಜಾನಂದರನ್ನು ಕಂಡು ವಿವೇಕಾನಂದರು ಸಂತೋಷಪಟ್ಟರು. ಅಷ್ಟು ಕಷ್ಟಪಟ್ಟು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡು ಬಂದಿದ್ದ ವಿರಜಾನಂದರನ್ನು ಕಂಡು "ಭೇಷ್ ಭೇಷ್, ನನಗೆ ತಕ್ಕ ಶಿಷ್ಯ ನೀನು" ಎನ್ನುತ್ತಾ ಸ್ವಾಮೀಜಿಯವರು ಅವರನ್ನು ಪ್ರಶಂಸಿಸಿದರು.

ಸ್ವಾಮೀಜಿಯವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ, ಜ್ವರ ಬರುತ್ತಿತ್ತು. ಆದ್ದರಿಂದ ಒಂದು ದಿನ ಅಲ್ಲಿಯೇ ವಿಶ್ರಮಿಸಿ ಮಾರನೆಯ ದಿನ ಸ್ವಾಮೀಜಿಯವರನ್ನು ದಂಡಿಯಲ್ಲಿ ಕುಳ್ಳಿರಿಸಿ, ಇತರರು ಕುದುರೆ ಹಾಗೂ ಕಾಲುನಡಿಗೆಯಲ್ಲಿ ಪ್ರಯಾಣ ಮುಂದುವರೆಸಿದರು. ೧೭ ಮೈಲಿ ದೂರ ಪ್ರಯಾಣ ಮಾಡಿ ಡೆಹರಿ ಎಂಬ ಸ್ಥಳದಲ್ಲಿ ವಿಶ್ರಮಿಸಿಕೊಂಡರು ಮೊದಲ ದಿನ. ವಿರಜಾನಂದರು ಸ್ವಾಮೀಜಿಯವರಿಗೆ ಮೊದಲೇ ಹೇಳಿದ್ದರು, ಯಾವುದೇ ಕಾರಣಕ್ಕೂ ಕೂಲಿಗಳಿಗೆ ವಿಶ್ರಾಂತಿ ತೆಗೆದುಕೊಳ್ಳಲು ಅನುಮತಿ ಕೊಡಬಾರದೆಂದು. ಎರಡನೆಯ ದಿನ ಡೆಹರಿಯ ಡಾಕ್ ಬಂಗಲೆಯಿಂದ ಎರಡು ಮೈಲಿ ದೂರ ಹೋಗುವುದರಲ್ಲೇ ಮಳೆ, ಹಿಮ ಬೀಳಲಾರಂಭಿಸಿದವು. ಇನ್ನೂ ಡಾಕ್‌ಬಂಗಲೆ ಸೇರಲು ೧೫ ಮೈಲಿ ಇದೆ. ಆ ಪರಿಸ್ಥಿತಿಯಲ್ಲಿ ಪ್ರಯಾಣ ಮಾಡಿ ೭ ಮೈಲಿ ದೂರ ಬರುವುದರಲ್ಲಿ ಅಪರಾಹ್ನ ೩ ಗಂಟೆಯಾಯಿತು. ಕೂಲಿಗಳು ಹೊಗೆಸೊಪ್ಪು ಸೇದಲು ಸ್ವಲ್ಪ ಕಾಲಾವಕಾಶವನ್ನು ಕೇಳಿ ಸ್ವಾಮೀಜಿಯವರ ಅನುಕಂಪೆಯಿಂದ ಅನುಮತಿ ಗಿಟ್ಟಿಸಿಕೊಂಡುಬಿಟ್ಟರು. ಆದರೆ ಹೊಗೆಸೊಪ್ಪು ಸೇದಲು ಕುಳಿತ ಕೂಲಿಗಳು ಏಳಲೇ ಇಲ್ಲ.

ಕತ್ತಲಾಗುತ್ತಾ ಬಂದಿತು. ಇದನ್ನೆಲ್ಲಾ ಗಮನಿಸುತ್ತಿದ್ದ ವಿರಜಾನಂದರು ಬೇರೇನೂ ದಾರಿ ಕಾಣದೆ ಹತ್ತಿರವೇ ಇದ್ದ ಟೀ ಅಂಗಡಿಯಲ್ಲೇ ರಾತ್ರಿ ಕಳೆಯುವ ನಿರ್ಧಾರ ಮಾಡಿದರು. ೩೧.೧೨.೧೯೦೦ರ ರಾತ್ರಿ ಅದೊಂದು ಶತಮಾನ ಬದಲಾಗುವ ಸಂಧಿಕ್ಷಣ. ಆ ಅಂಗಡಿಯಲ್ಲಿ ಬಹಳ ಚಳಿ. ಅದನ್ನು ಹೋಗಲಾಡಿಸಲು ವಿರಜಾನಂದರು ಬೆಂಕಿಯನ್ನು ಹೊತ್ತಿಸಿದರು. ಅದು ಸರಿಯಾಗಿ ಉರಿಯದೆ ಹೊಗೆ ತುಂಬಿಕೊಂಡಿತು. ಅಂಗಡಿಯವನು ಕೊಟ್ಟ ಒಣರೊಟ್ಟಿಯಿಂದ ಹೊಟ್ಟೆ ತುಂಬಿಸಿಕೊಂಡು ಆ ಅಂಗಡಿಯ ಮೂಲೆಯೊಂದರಲ್ಲಿ ಮಲಗಿದರು ವಿವೇಕಾನಂದರು. ಅಲ್ಲಲ್ಲಿ ಬಿದ್ದಿದ್ದ ಒಣಹುಲ್ಲು ಕಡ್ಡಿಗಳನ್ನು ತಂದು ತಲೆದಿಂಬು ತಯಾರಿಸಿಕೊಟ್ಟರು ವಿರಜಾನಂದರು. ಮಾರನೆಯ ದಿನ ಸ್ವಾಮೀಜಿಯವರು ಎದ್ದವರೇ, ತಮಗೆ ರಾತ್ರಿ ಚೆನ್ನಾಗಿಯೇ ನಿದ್ದೆ ಬಂದಿತೆಂದು ವಿರಜಾನಂದರಿಗೆ ತಿಳಿಸಿ ಅವರು ತಯಾರು ಮಾಡಿದ ತಲೆದಿಂಬನ್ನು ಮೆಚ್ಚುತ್ತಾ, "*you are very resourceful*"(ನೀನು ತುಂಬ ಕಾರ್ಯಕುಶಲ) ಎಂದರು.

ರಾತ್ರಿಯೆಲ್ಲ ಹಿಮವೃಷ್ಟಿಯಿಂದಾಗಿ ಸುಮಾರು ೧೨ ಇಂಚು ಹಿಮದಿಂದ ಆವೃತವಾದ ರಸ್ತೆಯಲ್ಲಿ ಪ್ರಯಾಣ ಮಾಡಬೇಕಾಗಿತ್ತು. ಆದರೆ ಸ್ವಾಮೀಜಿಯವರ ಪಾಲಿಗೆ ಅದು ಬಹಳ ಉತ್ಸಾಹದ ವಿಷಯವೇ ಆಗಿತ್ತು. ಪ್ರಕೃತಿಯ ಸೌಂದರ್ಯವನ್ನು ಕಂಡು ಆನಂದಿಸುತ್ತಾ ಪ್ರಯಾಣ ಮುಂದುವರೆಸಿದರು. ಆ ದಿನ ರಾತ್ರಿ ಡಾಕ್ ಬಂಗಲೆಯೊಂದರಲ್ಲಿ ವಿಶ್ರಮಿಸಿ ಮರುದಿನ ಸುಮಾರು ೨೧ ಮೈಲಿ ಪ್ರಯಾಣ ಮಾಡಿ ಧುನಾಘಾಟ್‌ನಲ್ಲಿ ವಿಶ್ರಮಿಸಿದರು. ಆ ದಿನ ವಿವೇಕಾನಂದರು ವಿರಜಾನಂದರ ಹೆಗಲ ಮೇಲೆ ಕೈಹಾಕಿ ಸ್ವಲ್ಪದೂರ ನಡೆಯಲು ಪ್ರಯತ್ನಿಸಿದರು.

ಆವರೆ ಸಾಧ್ಯವಾಗಲಿಲ್ಲ. ಆಗ ಅವರು ವಿರಜಾನಂದರಿಗೆ "ನೋಡಪ್ಪಾ, ನಾನು ಚಿಕ್ಕ ವಯಸ್ಸಿನಲ್ಲಿ ಇಂತಹ ಎತ್ತರ ತಗ್ಗಿನ ಪರ್ವತ ಶ್ರೇಣಿಯಲ್ಲಿ ದಿನವೂ ೨೫ ಮೈಲಿ ಅನಾಯಾಸವಾಗಿ ನಡೆಯುತ್ತಿದ್ದೆ. ಈಗ ನೋಡು ಸ್ವಲ್ಪ ನಡೆಯಲೂ ಕಷ್ಟವಾಗುತ್ತಿವೆ. ಆಯಾಸವಾಗುತ್ತಿವೆ. ನಾನು ನನ್ನ ಜೀವನದ ಕೊನೆಯ ದಿನಗಳನ್ನು ತಲುಪುತ್ತಿರುವೆನೋ ಎನ್ನಿಸುತ್ತಿದೆ" ಎಂದರು. ಸ್ವಾಮೀಜಿಯವರ ಮಾತನ್ನು ಕೇಳಿ ವಿರಜಾನಂದರ ಕಣ್ಣು ನೀರಿನಿಂದ ತುಂಬಿಹೋಯಿತು.

ಪ್ರಯಾಣ ನಿಧಾನವಾಗಿ ಮುಂದುವರೆದು ಎರಡು ದಿನ ಕಳೆದ ನಂತರ ಅಂದರೆ ೩.೧.೧೯೦೧ರಂದು ಎಲ್ಲರೂ ಕ್ಷೇಮವಾಗಿ ಮಾಯಾವತಿಯನ್ನು ತಲುಪಿದರು. ಮಾಯಾವತಿಯ ಅದ್ವೈತ ಆಶ್ರಮದಲ್ಲಿ ಸ್ವಾಮೀಜಿಯವರು ಕೇವಲ ೨ ವಾರಗಳಷ್ಟೇ ಕಳೆಯಲು ಸಾಧ್ಯವಾಯಿತು. ಆದರೆ ಅವರು ಅಲ್ಲಿ ಕಳೆದ ದಿನಗಳ ಸ್ಮೃತಿ ಮಾಯಾವತಿಯಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಅದ್ವೈತ ಆಶ್ರಮದ ಕಾರ್ಯಕಲಾಪಗಳು ತೃಪ್ತಿಕರವಾಗಿ ನಡೆದುಕೊಂಡು ಹೋಗುತ್ತಿರುವುದನ್ನು ಕಂಡು ಸ್ವಾಮೀಜಿಯವರಿಗೆ ಸಮಾಧಾನವಾಯಿತು. ಒಂದು ದಿನ ವಿರಜಾನಂದರು ಸ್ವಾಮೀಜಿಯವರಿಗೆ ಹೇಳಿದರು, ತಮಗೆ ದೀರ್ಘಕಾಲ ನಿರ್ಜನವಾದ ಪ್ರದೇಶದಲ್ಲಿ ಏಕಾಂತವಾಗಿ ಇದ್ದು ಸಾಧನೆ ಮಾಡಬೇಕೆಂದು ಆಸೆಯಿದೆ ಎಂದು. ಅದಕ್ಕೆ ವಿವೇಕಾನಂದರು "ಹೆಚ್ಚು ಕಠೋರವಾದ ತಪಸ್ಸಿನಿಂದ ಆರೋಗ್ಯ ಕೆಡುವುದು. ೫ ನಿಮಿಷ ಸರಿಯಾಗಿ ಧ್ಯಾನ ಮಾಡಿದರಾಯಿತು. ಮಿಕ್ಕ ವೇಳೆಯನ್ನು ಶಾಸ್ತ್ರಾಧ್ಯಯನ, ಪಾರಾಯಣ, ಪರಹಿತ ಕಾರ್ಯದಲ್ಲಿ ಕಳೆಯಬೇಕು. ನನ್ನ ಶಿಷ್ಯರು ತಪಸ್ಸಿಗಿಂತ ಕರ್ಮದಲ್ಲೇ ಹೆಚ್ಚು ನಿರತರಾಗಿರಬೇಕು" ಎಂದಾಗ ವಿರಜಾನಂದರು "ನೈತಿಕ ಮತ್ತು ಆಧ್ಯಾತ್ಮಿಕ ಬಲವನ್ನು ವೃದ್ಧಿಗೊಳಿಸಲು ತಪಸ್ಸು ಅತ್ಯಾವಶ್ಯಕ" ಎಂದು ಉತ್ತರಿಸಿದರು. ವಿರಜಾನಂದರು ಅಲ್ಲಿ ಇಲ್ಲದಿದ್ದಾಗ ಇತರರನ್ನು ಕುರಿತು ವಿವೇಕಾನಂದರು ಹೇಳುತ್ತಾರೆ : "ಕಾಲೀಕೃಷ್ಣ ಹೇಳುವುದು ಸತ್ಯ. ಧ್ಯಾನ ಧಾರಣಾದಿಗಳಲ್ಲಿ ಕಾಲ ಕಳೆಯುವ ಸಂನ್ಯಾಸಿಜೀವನವೇ ಅತ್ಯಂತ ಶ್ರೇಷ್ಠವಾದುದು." ಆದರೆ ವಿರಜಾನಂದರು ಸ್ವಾಮಿ ವಿವೇಕಾನಂದರ ಆದೇಶದಂತೆ ಕರ್ಮ, ಧ್ಯಾನಗಳನ್ನು ಸಮನ್ವಯಗೊಳಿಸಿದ ಸಾಧನಾಮಾರ್ಗವನ್ನು ಅಕ್ಷರಶಃ ಪಾಲಿಸಿದರು.

ಸ್ವಾಮೀಜಿಯವರು ಕಲ್ಕತ್ತೆಗೆ ಹೊರಡುವ ಸಮಯ ಹತ್ತಿರ ಬಂತು. ಮಾಯಾವತಿಯಿಂದ ಹೊರಟು ದಾರಿಯಲ್ಲಿ ಡೆಹರಿ ಬಂಗಲೆಯಲ್ಲಿ ವಿಶ್ರಾಂತಿ ಪಡೆದರು. ಆ ದಿನ ವಿರಜಾನಂದರು ಅಡುಗೆ ಮಾಡಿ ಎಲ್ಲರಿಗೂ ಉಣಬಡಿಸಿದರು. ಮುಂದುವರೆದು ಪಿಲಿಬಿತ್ ತಲುಪುವ ಸಮಯದಲ್ಲಿ ಹಠಾತ್ತಾಗಿ ಸ್ವಾಮಿ ವಿವೇಕಾನಂದರು ದಂಡಿಯಿಂದ ಕೆಳಗಿಳಿದು, ವಿರಜಾನಂದರನ್ನು ಕರೆದು "ಬಾ, ನಿನಗೆ ಕುದುರೆ ಸವಾರಿ ಹೇಳಿಕೊಡುತ್ತೇನೆ" ಎಂದರು. ತಾವೊಂದು ಕುದುರೆ ಹತ್ತಿ, ವಿರಜಾನಂದರನ್ನು ಇನ್ನೊಂದು ಕುದುರೆಯ ಮೇಲೆ ಕೂಡಿಸಿ, ಕಡಿವಾಣವನ್ನೂ ಚಾವಟಿಯನ್ನೂ ಕೈಯಲ್ಲಿ ಹಿಡಿದು, ಕುದುರೆಯ ಮೇಲೆ ಚಾವಟಿಯನ್ನಾಡಿಸುತ್ತಾ, "ನೀನೂ ಈ ರೀತಿಯೇ ಮಾಡು" ಎಂದು ವಿರಜಾನಂದರಿಗೆ ಆದೇಶವಿತ್ತರು. ಸೇನಾಧಿಪತಿಯ ಆದೇಶವನ್ನು ಶಿರಸಾವಹಿಸುವ ನಿಷ್ಠಾವಂತ ಸೈನಿಕನಂತೆ ವಿರಜಾನಂದರು ಅವರ ಆಜ್ಞೆಯನ್ನು ಪಾಲಿಸಿದರು. ಸ್ವಾಮೀಜಿಯವರ "ನೀನೂ ಹೀಗೆಯೆ ಮಾಡು" ಎಂಬ ಆದೇಶವನ್ನು ತಮ್ಮ ಆಜೀವನ ಪರ್ಯಂತ ಮರೆಯದೆ ಪರಿಪಾಲಿಸುತ್ತಿದ್ದರು. ಪಿಲಿಬಿತ್ ತಲುಪಿದ ನಂತರ ಅಲ್ಲಿನ ರೈಲು ನಿಲ್ದಾಣದಲ್ಲಿ ಸ್ವಾಮಿ ವಿವೇಕಾನಂದರು ಕಲ್ಕತ್ತೆಗೆ ಹೊರಡುವ ರೈಲನ್ನು ಹತ್ತಿದರು. ಇದೇ ತಮ್ಮ ಗುರುವಿನ ಕೊನೆಯ ದರ್ಶನ ಎಂಬುದನ್ನು ವಿರಜಾನಂದರು ಅಂದು ಕನಸಿನಲ್ಲಿಯೂ ಕಲ್ಪಿಸಿರಲಿಲ್ಲ.

ವೇದಾಂತಪ್ರಚಾರಕ್ಕಾಗಿ ಹಾಗೂ 'ಪ್ರಬುದ್ಧ ಭಾರತ'ಕ್ಕೆ ಗ್ರಾಹಕರನ್ನು ಸಂಗ್ರಹಿಸಲು ವಿರಜಾನಂದರು ೧೯೦೧ರಲ್ಲಿ ಮಾಯಾವತಿಯಿಂದ ಭಾರತದ ಪಶ್ಚಿಮೋತ್ತರ ಪ್ರದೇಶಗಳಿಗೆ ಪ್ರಯಾಣ ಬೆಳೆಸಿದರು. ಆಗ ಅವರು ಉತ್ತರಪ್ರದೇಶ, ಪಂಜಾಬ್, ಸಿಂಧ್, ಗುಜರಾತ್ ಪ್ರದೇಶಗಳನ್ನು ಸುತ್ತಿ ಬೊಂಬಾಯಿಗೆ ಬಂದರು. ಈ ಪರ್ಯಟನದಲ್ಲಿ ಅವರಿಗೆ ಸಂತೋಷ ಹಾಗೂ ದುಃಖ ಎರಡೂ ಉಂಟಾದವು. ಭಾರತದಲ್ಲಿ ಬಹುಮಂದಿಯ ಮೇಲೆ ಶ್ರೀರಾಮಕೃಷ್ಣರ ಹಾಗೂ ವಿವೇಕಾನಂದರ ವಿಚಾರ ಪ್ರಭಾವ ಬೀರಿದ್ದು ಕಂಡು ಒಂದು ಕಡೆ ಸಂತೋಷವಾದರೆ, ಸಮಾಜದ ಅವನತಿ, ದುರಾಚಾರ, ವಿಚಾರಹೀನ ನಡತೆ ಇವುಗಳನ್ನು ಕಂಡು ಅವರ ಹೃದಯ ದುಃಖದಿಂದ ತುಂಬಿಹೋಯಿತು. ಬೊಂಬಾಯಿಂದ ಕರಾಚಿಗೆ ಹೋಗಿ, ಅಲ್ಲಿಂದ ದ್ವಾರಕೆ, ಜುನಾಗಡ್, ಗಿರ್ನಾರ್ ಮಾರ್ಗವಾಗಿ ಅಹಮದಾಬಾದಿಗೆ ಬಂದರು. ಅಲ್ಲಿ ಅವರ ಆಧ್ಯಾತ್ಮಿಕ ವ್ಯಕ್ತಿತ್ವದಿಂದ ಪ್ರಭಾವಿತರಾಗಿ ಅನೇಕ ಮಂದಿ 'ಪ್ರಬುದ್ಧ ಭಾರತ'ಕ್ಕೆ ಗ್ರಾಹಕರಾದರು. ಅಲ್ಲಿರುವಾಗಲೇ ವಿರಜಾನಂದರಿಗೆ ಸ್ವಾಮಿ ವಿವೇಕಾನಂದರ ನಿರ್ಯಾಣದ ಸಮಾಚಾರ ಸಿಡಿಲಿನಂತೆ ಬಂದು ಎರಗಿತು. ಮಹಾಸಮಾಧಿಗೆ ಮುಂಚೆ ತಮ್ಮ ಸೇವೆಗಾಗಿ ವಿರಜಾನಂದರನ್ನು ಕಳುಹಿಸಿಕೊಡಬೇಕಾಗಿ ವಿವೇಕಾನಂದರು ಮಾಯಾವತಿಗೆ ಪತ್ರ ಬರೆದಿದ್ದರು. ಆದರೆ ವಿರಜಾನಂದರು ಕೆಲಸದ ನಿಮಿತ್ತವಾಗಿ ಮಾಯಾವತಿಯಿಂದ ಬಹುದೂರ ಇದ್ದುದರಿಂದ ಅವರಿಗೆ ಸಮಾಚಾರ ತಿಳಿಸಲಾಗಿರಲಿಲ್ಲ. ಸ್ವಾಮೀಜಿಯವರ ಕೊನೆಯ ದಿನಗಳಲ್ಲಿ ಅವರ ಸೇವಾಭಾಗ್ಯ ಕಳೆದುಕೊಂಡ ಮತ್ತು ಅವರ ಮಹಾಸಮಾಧಿಯ ದುಃಖಗಳಿಂದ ಜರ್ಜರಿತರಾದ ಅವರು ಮಾಯಾವತಿಗೆ ಹಿಂತಿರುಗಿ ಬಂದರು.

ಮಾಯಾವತಿಗೆ ವಾಪಸಾದ ಬಳಿಕ ವಿರಜಾನಂದರು ಅದ್ವೈತ ಆಶ್ರಮಕ್ಕೆ ಸಮೀಪದಲ್ಲೇ ಒಂದು ಸಾಧನಾಕುಟೀರವನ್ನು ಕಟ್ಟಿ ಎಲ್ಲ ಜವಾಬ್ದಾರಿಗಳಿಂದಲೂ ಕೆಲವು ದಿನ ಬಿಡಿಸಿಕೊಂಡು ಕಠೋರ ಸಾಧನೆಯಲ್ಲಿ ಮಗ್ನರಾದರು. ದಿನಕ್ಕೆ ೧೫ ಅಥವಾ

೧೬ ಗಂಟೆ ಜಪಧ್ಯಾನದಲ್ಲಿ ನಿರತರಾಗಿರುತ್ತಿದ್ದರು. ಕಠೋರ ತಪಸ್ಸಿನಲ್ಲಿ ನಿರತರಾದ ಅವರನ್ನು ಸಮಾಧಾನಪಡಿಸುತ್ತಾ ಆಶೀರ್ವಾದಪೂರ್ವಕವಾಗಿ ಸ್ವಾಮಿ ತುರೀಯಾನಂದರು ಒಂದು ಪತ್ರವನ್ನು ಬರೆದರು : "ಪ್ರಿಯ ವಿರಜಾನಂದ, ಸ್ವಾಮಿ ವಿವೇಕಾನಂದರ ಭೌತಿಕ ಶರೀರವಿಲ್ಲ, ನಿಜ. ಆದರೆ ಅವರ ಮಹಾಶಕ್ತಿ ಪ್ರಪಂಚದಲ್ಲೆಲ್ಲಾ ಕೆಲಸ ಮಾಡುತ್ತಿದೆ, ಪ್ರಜ್ವಲಿಸುತ್ತಾ ವಿಸ್ತಾರಗೊಳ್ಳುತ್ತಿದೆ. ನೀನು ಅವರ ಆಶೀರ್ವಾದ ಪಡೆದಿರುವೆ. ನಿನಗೆ ಮಂಗಳವಾಗುವುದು. ಇದರಲ್ಲಿ ಸಂದೇಹವಿಲ್ಲ. ವಿಶ್ವಾಸವಿಡು. ಭಗವದ್ ಭಜನೆ ಬಿಡಬೇಡ. ಆ ಮಹಾಶಕ್ತಿಯೆ ನಿನ್ನನ್ನು ಸರ್ವಕಾಲದಲ್ಲೂ ರಕ್ಷಿಸಿ ದಾರಿ ತೋರಿಸುತ್ತದೆ. ನಿನಗೆ ಸಿದ್ಧಿ ದೊರಕುತ್ತದೆ. ಸ್ವಾಮಿ ವಿವೇಕಾನಂದರ ಕಾರ್ಯದಲ್ಲಿ ತೊಡಗಿಸಿಕೊ. ಅದಕ್ಕಿಂತ ಹೆಚ್ಚಿನ ಕಾರ್ಯ ಈ ಜನ್ಮದಲ್ಲಿ ಇನ್ನೇನಿದೆ?"

ಮೌನವ್ರತಧಾರಣೆ ಮಾಡಿ ಸುಮಾರು ೮ ತಿಂಗಳು ಕಠೋರವಾದ ತಪಸ್ಸಿನಲ್ಲಿ ಮಗ್ನರಾದ ಕಾರಣ ಅವರ ಆರೋಗ್ಯ ಕೆಟ್ಟಿತು. ದೇಹ ದುರ್ಬಲವಾಯಿತು. ಆರೋಗ್ಯ ಕೆಟ್ಟಿರುವುದು ಮಠದಲ್ಲಿ ಹಿರಿಯರ ಗಮನಕ್ಕೆ ಬಂದು ಬೇಲೂರು ಮಠಕ್ಕೆ ಬರುವಂತೆ ಅವರಿಗೆ ಆದೇಶಿಸಿದರು. ವಿರಜಾನಂದರು ಮಠಕ್ಕೆ ಬಂದಾಗ ಅವರನ್ನು ಕಂಡು ಬ್ರಹ್ಮಾನಂದಜೀಯವರಿಗೆ ತೀವ್ರ ಗಾಬರಿಯಾಯಿತು. ಔಷಧಿ ಉಪಚಾರಗಳಿಂದ ಹೆಚ್ಚಿನ ಉಪಯೋಗವಾಗದ ಕಾರಣ ತಮ್ಮ ಶ್ರೀಗುರುವಿನ ದರ್ಶನಾಕಾಂಕ್ಷಿಗಳಾಗಿ ಜಯರಾಮ್‌ಬಾಟಿಗೆ ಬಂದರು. ಶ್ರೀಮಾತೆಯವರು ತಮ್ಮ ಪ್ರಿಯ ಶಿಷ್ಯನ ದುಃಸ್ಥಿತಿಗೆ ಮರುಗಿ ಅವರಿಗೆ ಧ್ಯಾನವನ್ನು ಸಹಸ್ರಾರದಲ್ಲಿ ಮಾಡದೆ, ಹೃದಯಕೇಂದ್ರದಲ್ಲಿ ಮಾಡುವಂತೆ ಸಲಹೆಯಿತ್ತರು. ಕೆಲದಿನಗಳು ಕಳೆದ ಮೇಲೆ ಅವರ ಆರೋಗ್ಯ ಸುಧಾರಿಸಿ ಬೇಲೂರು ಮಠಕ್ಕೆ ಮರಳಿದರು.

ಬೇಲೂರು ಮಠದಲ್ಲಿ ಸ್ವಾಮಿ ಬ್ರಹ್ಮಾನಂದರ ಸೇವೆಯನ್ನು ಮಾಡುವ ಸೌಭಾಗ್ಯ ಅವರಿಗೆ ದೊರಕಿತು. ೧೯೦೫ರಲ್ಲಿ ವೇದಾಂತ ಪ್ರಚಾರ ಕಾರ್ಯಕ್ಕಾಗಿ ಅಮೆರಿಕಕ್ಕೆ ವಿರಜಾನಂದರನ್ನು ಕರೆಸಿಕೊಳ್ಳಲು ಅಲ್ಲಿನ ಸ್ವಾಮಿಗಳು ಪ್ರಯತ್ನಿಸಿದರು. ಆದರೆ ವಿರಜಾನಂದರಿಗೆ ಸದಾ ತಪಸ್ಸು ಧ್ಯಾನಗಳೆಡೆಗೇ ಹೆಚ್ಚು ಒಲವಿದ್ದ ಕಾರಣ ಹರಿದ್ವಾರದಲ್ಲಿ ಸಾಧನೆಯಲ್ಲಿ ನಿರತರಾದರು. ಇದೇ ಸಮಯದಲ್ಲಿ ಮಾಯಾವತಿಯಲ್ಲಿನ ಅವರ ಸಂನ್ಯಾಸಿ ಸೋದರರಾದ ಸ್ವಾಮಿ ಸ್ವರೂಪಾನಂದರು ಚಿಕ್ಕ ವಯಸ್ಸಿನಲ್ಲೇ ಹಠಾತ್ತಾಗಿ ತೀರಿಹೋದರೆಂಬ ದುಃಖವಾರ್ತೆ ತಿಳಿದು ವಿಚಲಿತರಾದರು. ಮಾಯಾವತಿಯಲ್ಲಿ ನೆಲೆಸಿದ್ದ ಶ್ರೀಮತಿ ಸೆವಿಯರ್ ಅವರು ಸ್ವರೂಪಾನಂದರ ಮರಣದಿಂದ ಮತ್ತೂ ಕುಸಿದಿದ್ದರು. ಅವರಿಗೆ ಸಾಂತ್ವನ ಹೇಳಲು ವಿರಜಾನಂದರು ಮತ್ತೆ ಮಾಯಾವತಿಗೆ ತೆರಳಿದರು.

ಸ್ವಾಮಿ ವಿರಜಾನಂದರು ಮಾಯಾವತಿಯ ಅಧ್ಯಕ್ಷರಾಗಿ ಜವಾಬ್ದಾರಿಯನ್ನು ವಹಿಸಿಕೊಂಡು 'ಪ್ರಬುದ್ಧ ಭಾರತ'ದ ಕಾರ್ಯವನ್ನು ಮತ್ತೆ ಕೈಗೆತ್ತಿಕೊಂಡರು. ಆಗ ಲಭ್ಯವಿದ್ದ ಎಲ್ಲ ಸಾಮಗ್ರಿಗಳಿಂದ ಸ್ವಾಮಿ ವಿವೇಕಾನಂದರ ಜೀವನ ಹಾಗೂ ಕೃತಿಗಳನ್ನು ಮೊಟ್ಟಮೊದಲ ಬಾರಿಗೆ ಸಮಗ್ರವಾಗಿ ಪ್ರಕಟಿಸುವ ಸಂಕಲ್ಪ ಮಾಡಿದರು. ಇದೊಂದು ಭಗೀರಥ ಪ್ರಯತ್ನವೇ ಆಗಿತ್ತು. ಆದರೆ ಆ ಪ್ರಯತ್ನದಲ್ಲಿ ವಿರಜಾನಂದರು ಸಂಪೂರ್ಣವಾಗಿ ಯಶಸ್ವಿಯಾದರು. ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಓದಿದ ಸ್ವಾಮಿ ಅಖಂಡಾನಂದರು ವಿರಜಾನಂದರಿಗೆ ಒಂದು ಪತ್ರವನ್ನು ಬರೆಯುತ್ತಾ, "ಪ್ರಿಯ ವಿರಜಾನಂದ, ಸ್ವಾಮಿ ವಿವೇಕಾನಂದರ ಸುಂದರವಾದ ಜೀವನ ಚರಿತ್ರೆಯನ್ನು ಬೆಳಕಿಗೆ ತಂದಿರುವ ಈ ಒಂದು ಮಹತ್ಕಾರ್ಯದಿಂದ ಅದ್ವೈತ ಆಶ್ರಮದ ಗೌರವ ಮತ್ತು ಕೀರ್ತಿ ಚಿರಕಾಲಕ್ಕೂ ನಿಲ್ಲುವುದು. ನೀನು ಧನ್ಯ" ಎಂದು ಅವರನ್ನು ಆಶೀರ್ವದಿಸಿದರು. ಆ ಸುಂದರವಾದ ೨ ಸಂಪುಟಗಳನ್ನು ಓದಿ ಸ್ವಾಮಿ ಶುದ್ಧಾನಂದರು ವಿರಜಾನಂದರಿಗೆ ಒಂದು ಪತ್ರ ಬರೆದು, "ಪ್ರಿಯ ವಿರಜಾನಂದ, ದಣಿವರಿಯದ ನಿನ್ನ ಶ್ರಮ ಮತ್ತು ನಿಷ್ಕಾಮಂತ ಕೆಲಸದಿಂದಾಗಿ ಈ ಬೃಹದ್‌ಕೃತಿ ಬೆಳಕಿಗೆ ಬಂತು. ಇದು ನಿನ್ನನ್ನು ಬಿಟ್ಟು ಮತ್ತಾರಿಗೂ ಸಾಧ್ಯವಾಗದ ಕೆಲಸವೆಂದೇ ನನ್ನ ಅಭಿಪ್ರಾಯ" ಎಂದು ತಿಳಿಸಿದರು.

ತೀವ್ರ ಚಟುವಟಿಕೆಯಲ್ಲಿದ್ದರೂ ವಿರಜಾನಂದರ ಮನಸ್ಸು ಸದಾ ತಪಸ್ಸಿನಲ್ಲಿ ನಿರತವಾಗಿರಲು ಬಯಸುತ್ತಿತ್ತು. ಈ ಬಾರಿ ಮಾಯಾವತಿಯಿಂದ ಸ್ವಲ್ಪ ದೂರವಿರುವ ಶ್ಯಾಮಲಾತಲ್ ಎಂಬಲ್ಲಿ ತಪೋನಿರತರಾದರು. ಅವರು ತಪೋನಿರತರಾಗುತ್ತಿದ್ದ ಸ್ಥಳವೇ ಆಶ್ರಮವಾಗುತ್ತಿತ್ತು. ಅಂತೆಯೇ ಶ್ಯಾಮಲಾತಲ್‌ನಲ್ಲಿ ವಿವೇಕಾನಂದ ಆಶ್ರಮ ಮೈತಾಳಿತು. ತಪೋನಿರತರಾಗಿದ್ದರೂ ಸ್ವಾಮೀಜಿಯವರ ಜೀವನದ ೩ ಮತ್ತು ೪ ನೆಯ ಭಾಗಕ್ಕಾಗಿ ಮಾಹಿತಿ ಸಂಪಾದನೆ ಹಾಗೂ ಅವುಗಳ ಪ್ರಕಟನೆಯ ಕಾರ್ಯದಲ್ಲಿ ಮಗ್ನರಾದರು. ಶ್ಯಾಮಲಾತಲ್‌ನ ವಿವೇಕಾನಂದ ಆಶ್ರಮದಲ್ಲಿ ವಿರಜಾನಂದಜಿ ಸುಮಾರು ೧೨ ವರ್ಷ ತಪೋನಿರತರಾಗಿದ್ದರು. ೧೯೨೦ರಲ್ಲಿ ಶ್ರೀಮಾತೆಯವರ ಮಹಾ ಸಮಾಧಿ ಮತ್ತೊಮ್ಮೆ ವಿರಜಾನಂದರನ್ನು ಕದಲಿಸಿತು. ಅವರ ಮನಸ್ಸು ಸಂಘಜನನಿಯ, ಶ್ರೀಗುರುವಿನ ದಿವ್ಯಸ್ಮೃತಿಯ ತೀವ್ರವಾದ ಭಾವದಲ್ಲಿ ಮಗ್ನವಾಯಿತು.

೧೯೨೬ರಲ್ಲಿ ಶ್ರೀರಾಮಕೃಷ್ಣ ಮಠ ಮತ್ತು ಮಿಷನ್ನಿನ ಮಹಾಸಮ್ಮೇಳನಕ್ಕೆ ಕಾರ್ಯದರ್ಶಿಯಾಗಿ ವಿರಜಾನಂದರನ್ನು ನೇಮಿಸಲಾಯಿತು. ಅವರ ಗುರುಭಾಯಿಗಳಾದ ಸ್ವಾಮಿ ಶುದ್ಧಾನಂದರು ೧೯೨೭ರಲ್ಲಿ ರಾಮಕೃಷ್ಣ ಮಿಷನ್ನಿನ ಕಾರ್ಯದರ್ಶಿಗಳಾದಾಗ, ವಿರಜಾನಂದರು ಅವರಿಗೆ ಬಲಗೈಯಾಗಿ ನಿಂತು ಉದ್ಬೋಧನದ ಕಾರ್ಯಾಲಯ ಹಾಗೂ ನಿವೇದಿತಾ ಶಾಲೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದರು. ಮುಂದೆ ೧೯೩೪ರಲ್ಲಿ ಸ್ವಾಮಿ ಅಖಂಡಾನಂದರು ಮಠ ಮತ್ತು ಮಿಷನ್ನಿನ ಅಧ್ಯಕ್ಷರಾದಾಗ, ವಿರಜಾನಂದರೇ ಕಾರ್ಯದರ್ಶಿಯಾಗಿ ಜವಾಬ್ದಾರಿ

ಯನ್ನು ನಿರ್ವಹಿಸಬೇಕಾಯಿತು. ೧೯೩೬ರಲ್ಲಿ ಐತಿಹಾಸಿಕವಾಗಿ ಮಹತ್ತ್ವಪೂರ್ಣವಾದ ವಿಶ್ವಾದ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟ ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವದ ಕಾರ್ಯಕ್ರಮ. ಯೋಜನೆಗಳ ರೂವಾರಿಗಳಾಗಿ ಸ್ವಾಮಿ ವಿರಜಾನಂದರು ಪ್ರಮುಖಪಾತ್ರವನ್ನು ವಹಿಸಿದರು. ೧೯೩೮ರಲ್ಲಿ ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿ ನೇಮಕಗೊಂಡು, ಅದೇ ವರ್ಷದ ಕೊನೆಯಲ್ಲಿ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ಶುದ್ಧಾನಂದರು ಹಠಾತ್ತಾಗಿ ತೀರಿಕೊಂಡಿದ್ದರಿಂದ ಸಂಘದ ಮಹಾಧ್ಯಕ್ಷರಾಗಿ ನೇಮಕಗೊಂಡರು.

ಸಂಘನಾಯಕರಾಗಿ ಹಲವು ಬಾರಿ ಇಡೀ ಭಾರತ ಪರ್ಯಟನೆ ಕೈಗೊಂಡು ಜನರ ಮನವನ್ನು ಆಧ್ಯಾತ್ಮಿಕತೆಯತ್ತ ತಿರುಗಿಸುವುದರಲ್ಲಿ ಯಶಸ್ವಿಯಾದರು. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದ ನಾಯಕನ ಗುಣ ಇವರಲ್ಲಿ ಮೈತಳೆದಿತ್ತು—ಸಂಘಗುರುವಾದರೂ ಸಕಲ ಸಂನ್ಯಾಸಿಗಳ ಸೇವಕ ತಾನೆಂದು ಭಾವಿಸುತ್ತಿದ್ದರು. ಅವರ ಈ ನಿರಭಿಮಾನ ಅನನ್ಯ ಸಾಧಾರಣ. ಬೇಲೂರು ಮಠದ ಬಳಿಯಲ್ಲೇ ಶಾರದಾ ಪೀಠ ಆರಂಭವಾದುದು ಇವರ ಸ್ಫೂರ್ತಿಯಿಂದಲೇ. **"ಸಮಷ್ಟಿ ರೂಪದ ಸಂಘವೇ ಶ್ರೀರಾಮಕೃಷ್ಣರು"** ಎಂದು ಎಲ್ಲರಿಗೂ ಮನದಟ್ಟು ಮಾಡಲು ವಿರಜಾನಂದರು ಶ್ರಮಿಸುತ್ತಿದ್ದರು. ಈ ಬೃಹತ್ ಶ್ರೀರಾಮಕೃಷ್ಣ ಸಂಘದ ತಿರುಳು ಹಾಗೂ ರಸವೇ ಶ್ರೀರಾಮಕೃಷ್ಣರು. ಈ ಮಹಾಸಂಘವನ್ನು ಅವರು ಅಶ್ವತ್ಥ ವೃಕ್ಷಕ್ಕೆ ಹೋಲಿಸಿ **ಊರ್ಧ್ವ ಮೂಲಂ ಅಧಃ ಶಾಖಂ**—ಊರ್ಧ್ವಮೂಲದಲ್ಲಿ ಶ್ರೀರಾಮಕೃಷ್ಣರಿದ್ದಾರೆ, ಕೆಳಗಿರುವ ಶಾಖೆಗಳೆಲ್ಲಾ ಬೃಹತ್ ರಾಮಕೃಷ್ಣ ಮಠದ ಶಾಖಾಕೇಂದ್ರಗಳು ಎನ್ನುತ್ತಿದ್ದರು.

ಸ್ತ್ರೀಯರಿಗಾಗಿಯೇ ಪ್ರತ್ಯೇಕವಾದ ಶ್ರೀಶಾರದಾಮಠ ಸ್ಥಾಪಿಸುವುದು ಸ್ವಾಮೀಜಿಯವರ ಕನಸಾಗಿತ್ತು. ವಿರಜಾನಂದಜಿಯವರು ಅದನ್ನು ಸಾಕಾರಗೊಳಿಸಲು ತೀವ್ರವಾದ ಕಾಳಜಿ ವಹಿಸಿದ್ದರು. ಆದರೆ ತಪೋಮುಖವಾದ ಅವರ ಮನಸ್ಸು ಸದಾ ಹಿಮಾಲಯದೆಡೆಗೆ ಸೆಳೆಯಲ್ಪಡುತ್ತಿತ್ತು. ಸಂಘದ ಮಹಾಧ್ಯಕ್ಷರಾದಮೇಲೂ ಪ್ರತಿ ವರ್ಷ ಹಲವು ತಿಂಗಳು ಶ್ಯಾಮಲಾತಲದ ವಿವೇಕಾನಂದ ಆಶ್ರಮದಲ್ಲಿ ಕಳೆಯುತ್ತಿದ್ದರು. ಆದರೆ ಕ್ರಮೇಣ ಅವರ ಹೃದ್‌ರೋಗ ಅಧಿಕವಾಗಲು ಗುಡ್ಡಗಾಡು ಪ್ರದೇಶಕ್ಕೆ ಹೋಗುವುದನ್ನು ವೈದ್ಯರು ನಿಷೇಧಿಸಿದರು. ವಿರಜಾನಂದರು ಜೀವನದ ಕೊನೆಯ ಭಾಗದಲ್ಲಿ ತಮ್ಮ ಶರೀರ ವ್ಯಾಧಿಗಳಿಂದ ನರಳುತ್ತಿದ್ದರೂ, ದೇಹಭಾವ ತೊರೆದವರಾಗಿದ್ದು ಸದಾ ಆನಂದದಿಂದಿರುತ್ತಿದ್ದರು. ಸ್ವಾಮೀಜಿಯವರ ಶಿಷ್ಯರಾದ ಶರತ್‌ಚಂದ್ರ ಚಕ್ರವರ್ತಿಗಳಿಗೆ ಬರೆದಿರುವ ಒಂದು ಪತ್ರದಲ್ಲಿ ತಮ್ಮ ಆಗಿನ ಮನಃಸ್ಥಿತಿಯನ್ನು ಈ ರೀತಿ ವ್ಯಕ್ತಪಡಿಸಿರುತ್ತಾರೆ: "ಜಯ್ ರಾಮಕೃಷ್ಣಕೀ ಜಯ್! ಜಯ್ ಸ್ವಾಮೀಜಿಕೀ ಜಯ್! ಪ್ರತಿ ನಿಃಶ್ವಾಸದಲ್ಲೂ ಇದನ್ನೇ ಹೇಳು. ಯಾತರ ಭಯ? ಯಾತರ



ಸಂಘಗುರುವಾಗಿ ಸ್ವಾಮಿ ವಿರಜಾನಂದಜಿ

ಚಿಂತೆ? ನೀನಾದರೋ ವೇದಾಂತಿ, ನಿನಗೆ ಇನ್ನು ರೋಗವೇನು? ಶರೀರವೇನು? ನೀನು ಅಖಂಡ ಸಚ್ಚಿದಾನಂದ!" ತಮ್ಮ ಜೀವನದ ಕಡೆಯ ದಿನಗಳನ್ನು ಕೇವಲ ಶ್ರೀರಾಮಕೃಷ್ಣರ ಹಾಗೂ ಶ್ರೀಮಾತೆಯವರ ನಾಮಗಳನ್ನು ಉಚ್ಚರಿಸುತ್ತಾ ಕಳೆದರು. ಯಾವಾಗಲೂ ಅವರು ತಮ್ಮ ಮೃದು ಮಧುರ ಸ್ವರದಲ್ಲಿ "ಹೇ ಪ್ರಭೋ, ಹೇ ಮಾ" ಎನ್ನುತ್ತಿದ್ದರು. ಮಾತೆಯ ಮಡಿಲಲ್ಲಿ ದೀರ್ಘ ವಿಶ್ರಾಂತಿಗಾಗಿ ಕಾತರಿಸುವಂತಿತ್ತು ಅವರ ದನಿ. ಎಲ್ಲರಿಗೂ ಇನ್ನು ಅವರ ಮಹಾಸಮಾಧಿಯ ಕಾಲ ದೂರವಿಲ್ಲವೆಂದು ತಿಳಿದುಹೋಯಿತು. ಅನೇಕಾನೇಕ ಭಕ್ತರ ಹೃದಯಕ್ಕೆ ಶಾಂತಿ, ಆಧ್ಯಾತ್ಮಿಕ ಬೆಳಕನ್ನು ನೀಡಿದ ಸ್ವಾಮಿ ವಿರಜಾನಂದರೆಂಬ ಆಧ್ಯಾತ್ಮಿಕ ಚೇತನ ೧೯೫೧ರಲ್ಲಿ ಜ್ಯೇಷ್ಠ ಬುಧವಾರ ೧೫ ನೇ ದಿನಾಂಕ ಬ್ರಹ್ಮಮುಹೂರ್ತದಲ್ಲಿ ಮಹಾಸಮಾಧಿಯೋಗದಿಂದ ಶ್ರೀರಾಮಕೃಷ್ಣರ ಚರಣಕಮಲಗಳಲ್ಲಿ ಲೀನವಾಯಿತು.

ಅವರ ತಪಸ್ಸು ಮತ್ತು ಅನುಭವಗಳ ಫಲಸ್ವರೂಪವಾದ, ಅವರ ಆಧ್ಯಾತ್ಮಿಕ ಉಪದೇಶಗಳನ್ನೊಳಗೊಂಡ, ಸಾಧಕರಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡುವ **ಪರಮಾರ್ಥ ಪ್ರಸಂಗ**ವೆಂಬ ಪುಸ್ತಕ ಪ್ರಸಿದ್ಧವಾಗಿದೆ. *